ಸಹಾಯ ಮಾಡಲು ಜೊತೆಗೆ ಯಾರೂ ಇಲ್ಲದೆ ನಿಮಗೂ ಕಷ್ಟವಾಗುತ್ತಿದೆ. ಇವಳಿದ್ದರೆ ಒಳ್ಳೆಯದೇ. ಯಾವಾಗ ಬರುತ್ತಾಳಂತೆ?" ನಾನೆಂದೆ, "ಅತ್ತೆಮ್ಮನವರನ್ನು ಕೇಳಿ ಇವತ್ತು, ನಾಳೆಯ ಒಳಗೆ ಬಂದು ಬಿಡುತ್ತೇನೆ." ವಿಷಯ ತಿಳಿದು ಅತ್ತೆಮ್ಮನಿಗೆ ತುಂಬ ಸಂತೋಷವಾಯಿತು. ಮರುದಿನವೇ ನನ್ನನ್ನು ಕರೆದುಕೊಂಡು ಬಂದು ಶ್ರೀಮಾತೆಯ ಬಳಿ ಬಿಟ್ಟರು. ಅದು ೧೯೧೩ರ ನವೆಂಬರ್ ತಿಂಗಳು. ಸುಧೀರಾ ಅಕ್ಕನಿಗೆ ಇದೊಂದೂ ಗೊತ್ತಿರಲಿಲ್ಲ. ಅವರು ಒಂದು ದಿನ ಶ್ರೀಮಾತೆಯನ್ನು ನೋಡಲು ಬಂದವರು, ಅಲ್ಲಿ ನನ್ನನ್ನು ಕಂಡು ಬೇಜಾರುಮಾಡಿಕೊಂಡರು. ನನ್ನ ಸಂಬಂಧಿಕರು ಶ್ರೀಮಾತೆಯವರ ಬಳಿ ಬಂದು ತೊಂದರೆ ಕೊಡಲು ಆರಂಭಿಸಿರಬಹುದೆಂದು ಅವರು ಅಂದುಕೊಂಡಿದ್ದರು. ಆದರೆ, ಶ್ರೀಮಾತೆ ನನ್ನ ಜವಾಬ್ದಾರಿಯನ್ನು ತೆಗೆದುಕೊಂಡಿದ್ದಾರೆಂದು ಕೇಳಿ ತುಂಬ ಖುಷಿಪಟ್ಟರು. ಇನ್ನೇನೂ ಹೇಳಲಿಲ್ಲ.

ನಾವು ಕಾಶಿಯಲ್ಲಿದ್ದಾಗ ಪೂಜ್ಯ ಸ್ವಾಮಿ ಬ್ರಹ್ಮಾನಂದರು ಸುಧೀರಾ ಅಕ್ಕನಿಗೆ ಹೇಳಿದ್ದರು, "ಸುಧೀರಾ, ಇಲ್ಲಿಯ ನಮ್ಮ ಸೇವಾಶ್ರಮದಲ್ಲಿ ಮಹಿಳಾ ರೋಗಿಗಳ ಸೇವೆಗೆ ಹೆಂಗಸರಿಲ್ಲ. ನೀನು ಒಬ್ಬಳು ಹುಡುಗಿಯನ್ನು ಈ ಕೆಲಸಕ್ಕೆ ಕಳುಹಿಸುವೆಯಾ?" ಆಗಿನಿಂದ ಸುಧೀರಾ ಅಕ್ಕ ನನ್ನನ್ನು ಡಾಫ್‌ರಿನ್ ಆಸ್ಪತ್ರೆಯಲ್ಲಿ ನರ್ಸಿಂಗ್ ಕಲಿಸಲು ಸೇರಿಸುವ ಬಗ್ಗೆ ಯೋಚಿಸುತ್ತಿದ್ದರು. ನಾನು ಸ್ವತಂತ್ರವಾಗಿ ಬದುಕಲು ಹಣ ಗಳಿಸುವ ಏನಾದರೂ ವಿದ್ಯೆ ಕಲಿಯಲಿ ಎಂದು ಸಿಸ್ಟರ್ ಕ್ರಿಸ್ಟೀನ್ ಕೂಡ ಇಚ್ಛೆಪಟ್ಟಿದ್ದರು. ಈ ಸಮಯದಲ್ಲಿ ಆಗಿನ ಗವರ್ನರ್ ಲಾರ್ಡ್ ಕಾರ್ ಮೈಬಲನ ಪತ್ನಿ, ಡಾಫ್‌ರಿನ್ ಆಸ್ಪತ್ರೆಯಲ್ಲಿ ನರ್ಸಿಂಗ್ ಕಲಿಯಲು ಮೂವರು ಹಿಂದೂ ಹುಡುಗಿಯರಿಗೆ ಅವಕಾಶ ಕೊಡುವುದಾಗಿ ಹೇಳಿದರು. ಆಕೆ ಸಿಸ್ಟರ್ ಕ್ರಿಸ್ಟೀನ್‌ರ ಸ್ನೇಹಿತೆ. ಕ್ರಿಸ್ಟೀನ್ ನನ್ನ ಹೆಸರನ್ನು ಆಕೆಗೆ ಕೊಟ್ಟರು. ನಾನು ಸೇರುವುದು ನಿರ್ಧಾರವಾದ ಮೇಲೆ ಸುಧೀರಾ ಅಕ್ಕ ಉದ್ಬೋಧನಕ್ಕೆ ಬಂದು, ಎಲ್ಲಾ ವಿಷಯ ತಿಳಿಸಿದಾಗ ಗೋಲಾಪ್ ಮಾ ರೇಗಿ ಕೂಗಾಡಿದರು, "ಸುಧೀರಾಳ ಬುದ್ಧಿ ನೋಡಿ ! ಬ್ರಾಹ್ಮಣರ ಹುಡುಗಿಯನ್ನು ಆಸ್ಪತ್ರೆಯ ಕೆಲಸಕ್ಕೆ ಕಳಿಸು ತ್ತಿದ್ದಾಳೆ. ಎಂಥ ಮನೆಹಾಳು ಕೆಲಸ ! ಇವಳ ಕೈಯಲ್ಲಿ ಯಾರೂ ಅನ್ನ ತಿನ್ನುವಂತಿಲ್ಲ ಇನ್ನು." ಶ್ರೀಮಾತೆ ಇದನ್ನೆಲ್ಲಾ ಕೇಳಿ ಶಾಂತವಾಗಿ ಹೇಳಿದರು, "ಇದೆಂಥ ಮಾತು, ಗೋಲಾಪ್! ಅಲ್ಲಿ ಕಲಿತು ಅವಳು ನಮ್ಮ ಸೇವೆಯನ್ನೇ ಮಾಡುತ್ತಾಳೆ."

ಶ್ರೀಮಾತೆ ಸೇವೆಯ ಈ ಕೆಲಸವನ್ನು ಕಲಿಯುವುದಕ್ಕೆ ತುಂಬ ಪ್ರೋತ್ಸಾಹ ಕೊಟ್ಟರು. ನನ್ನನ್ನು ಆಸ್ಪತ್ರೆಗೆ ಕಳಿಸಲು ಒಪ್ಪಿದರು. ನನ್ನ ಮನಸ್ಸಿನ ವೇದನೆಯನ್ನು ಹೊರಗೆ ವ್ಯಕ್ತಪಡಿಸದೆ, ಕದ್ದು ಮುಚ್ಚಿ ಕಣ್ಣೀರು ಕರೆಯಲಾರಂಭಿಸಿದೆ. ಅವರಿವರ ಮನೆಗಳಲ್ಲಿ ತಿರುಗಾಡುತ್ತಿದ್ದ ಆ ಕಷ್ಟದ ದಿನಗಳು ಕೊನೆಯಾಗಿ ಶ್ರೀಮಾತೆಯ ಸಾನ್ನಿಧ್ಯದಲ್ಲಿರುವ ಸುಯೋಗ ಸಿಕ್ಕಿತ್ತು. ಇದನ್ನೂ ಬೇಗ ಕಳೆದುಕೊಂಡು ಇನ್ನೆಲ್ಲಿಗೆ ಹೋಗಬೇಕಪ್ಪಾ ಎಂದು ನನಗೆ ತುಂಬ ಕಳವಳವಾಗಿತ್ತು.

೧೯೧೪ ರ ಫೆಬ್ರವರಿಯಲ್ಲಿ ಡಾಫ್‌ರಿನ್ ನರ್ಸಿಂಗ್ ಸ್ಕೂಲಿಗೆ ಸೇರಿಕೊಂಡೆ. ನಾನು ಹೊರಡುವಾಗ ಶ್ರೀಮಾತೆ ಬಂದು ಒಳ್ಳೆಯ ಕಂಬಳಿ ಕೊಂಡುಕೊಟ್ಟರು. ಹೊರಡುವ ದಿನ ನನ್ನ ತಲೆ, ಮೈಯನ್ನು ಸವರುತ್ತಾ, ತುಂಬು ಆಶೀರ್ವಾದ ಮಾಡಿದರು. ೧೯೧೬ ರಲ್ಲಿ ಬೇಲೂರುಮಠದಲ್ಲಿ ದುರ್ಗಾಪೂಜೆಯ ಸಮಯದಲ್ಲಿ ಸುಧೀರಾ ಅಕ್ಕ ನನಗೆ ಪತ್ರ ಬರೆದರು. "ಬೇಲೂರು ಮಠಕ್ಕೆ ಶ್ರೀಮಾತೆ ಪೂಜೆಯ ಸಮಯದಲ್ಲಿ ಹೋಗುತ್ತಾರೆ. ನಾವು ಕೂಡ ಎಲ್ಲರೂ ಅವರೊಡನೆ ಹೋಗುತ್ತೇವೆ. ನೀನೂ ರಜೆ ಹಾಕಿ ಬಾ." ಆಸ್ಪತ್ರೆಯಲ್ಲಿ ರಜೆ ಕೊಡಲು ಒಪ್ಪಲಿಲ್ಲ. ಒಂದೇ ಒಂದು ದಿನ ಬೇಕಾದರೆ ಕೊಡುತ್ತೇವೆ ಎಂದರು. ಆ ಒಂದು ದಿನದ ರಜೆಯಲ್ಲಿ ನಾನು ಸಂಜೆ ಬೇಲೂರುಮಠಕ್ಕೆ ಹೋದೆ. ದುರ್ಗೆಯ ಆರತಿ ನೋಡಿದ ನಂತರ ಶ್ರೀಮಾತೆ ತಮ್ಮ ಕೋಣೆಗೆ ಹೊರಟುಹೋಗಿದ್ದರು. ಸುಧೀರಾ ಅಕ್ಕ ಕುಳಿತು ಹಾಡು ಕೇಳುತ್ತಿದ್ದರು. ನನ್ನನ್ನು ನೋಡಿ ಆಶ್ಚರ್ಯಪಟ್ಟರು. ಮರುದಿನ ಬೆಳಿಗ್ಗೆಯೇ ಹಿಂತಿರುಗಬೇಕು ಎಂದಾಗ ಅವರೆಂದರು, "ನಾಳೆಯೇ ಹೋಗಬೇಕಾಗಿಲ್ಲ. ಇನ್ನೂ ಕೆಲ ದಿನಗಳು ಬಿಟ್ಟು ಹೋಗು." ನಾನೆಂದೆ, "ಹಾಗಿದ್ದರೆ ನೀವು ಆಸ್ಪತ್ರೆಯವರಿಗೆ ಒಂದು ಪತ್ರ ಬರೆದು ಕೊಡಿ. ಇಲ್ಲದಿದ್ದರೆ ಫಜೀತಿ ಯಾಗುತ್ತದೆ." ಹಾಡು ಮುಗಿದ ಮೇಲೆ ಶ್ರೀಮಾತೆಯವರ ಬಳಿಹೋಗಿ ಪ್ರಣಾಮ ಮಾಡಿದೆ. ಅವರೂ ನನ್ನನ್ನು ನೋಡಿ ಸಂತೋಷಪಟ್ಟರು. ದುರ್ಗಾಪೂಜೆಯ ಆ ಕೆಲದಿನಗಳು ಶ್ರೀಮಾತೆಯ ಜೊತೆ ಆನಂದದಿಂದ ಕಳೆದವು.

ನಾನು ಅಷ್ಟು ಕೇಳಿಕೊಂಡಿದ್ದರೂ ಸುಧೀರಾ ಅಕ್ಕ ಆಸ್ಪತ್ರೆಗೆ ಯಾವ ಪತ್ರವನ್ನೂ ಬರೆದುಕೊಡಲಿಲ್ಲ. ಆಸ್ಪತ್ರೆಯಲ್ಲಿ ನಾನು ಚೆನ್ನಾಗಿ ಬೈಗುಳ ತಿನ್ನಬೇಕಾಯಿತು. ನನಗೆ ಶಿಕ್ಷೆ ಕೊಡಲು ಅವರು, "ಇನ್ನೂ ಮೂರು ತಿಂಗಳು ಹೆಚ್ಚಾಗಿ ಇಲ್ಲಿ ಕೆಲಸ ಮಾಡಬೇಕು, ಇಲ್ಲದಿದ್ದರೆ ದಂಡ ತೆರಬೇಕು" ಎಂದರು. ಪರೀಕ್ಷೆಗೆ ಇನ್ನೂ ಮೂರು ತಿಂಗಳು ಬಾಕಿಯಿತ್ತು. ಅದಾದ ಮೇಲೆ ಮತ್ತೆ ಮೂರು ತಿಂಗಳು ಅಲ್ಲಿರಬೇಕೆಂದು ಕೇಳಿ ನಾನು ಪೆಚ್ಚಾದೆ. "ನೀವೆಂದಂತೆ ದಂಡ ಕೊಡುತ್ತೇನೆ. ಮತ್ತೂ ಮೂರು ತಿಂಗಳು ಇಲ್ಲಿರು ವುದು ಸಾಧ್ಯವೇ ಇಲ್ಲ" ಎಂದು ಉತ್ತರಕೊಟ್ಟೆ. ಇದರಿಂದ ಕೋಪಗೊಂಡ ಮೇಲ್ವಿಚಾರಕರು ನನ್ನ ಮೇಲೆ ಆರೋಪ ಮಾಡಿ, ಉದ್ಬೋಧನಕ್ಕೆ ಒಂದು ಪತ್ರ ಕಳಿಸಿದರು. ಸುಧೀರಾ ಅಕ್ಕ ನಿವೇದಿತಾ ಶಾಲೆಯ ದೊಡ್ಡ ಹುಡುಗಿಯರೊಂದಿಗೆ ದಕ್ಷಿಣಭಾರತದ ತೀರ್ಥಕ್ಷೇತ್ರಗಳನ್ನು ದರ್ಶಿಸಲು ಹೊರಟುಹೋಗಿದ್ದರು. ಉದ್ಬೋಧನದಲ್ಲಿದ್ದ ಪೂಜ್ಯ ಸ್ವಾಮಿ ಶಾರದಾನಂದರು ಈ ಪತ್ರ ನೋಡಿ ಗಾಬರಿಯಾದರು. ಅವರಿಗೆ ಈ ವಿಚಾರ ಏನೂ ಗೊತ್ತಿರಲಿಲ್ಲ. ಕೂಡಲೇ ಆಸ್ಪತ್ರೆಗೆ ಜನರನ್ನು ಕಳುಹಿಸಿದರು. ನಾನು ನನ್ನ ಸಾಮಾನುಗಳನ್ನೆಲ್ಲಾ ಕಟ್ಟಿಕೊಂಡು ಉದ್ಬೋಧನಕ್ಕೆ ಹೊರಟುಬಂದೆ. ಸುಧೀರಾ ಅಕ್ಕ ಹಿಂತಿರುಗಿದವರು, ಡಾಫ್‌ರಿನ್ ಆಸ್ಪತ್ರೆಗೆ ಹೋಗಿ ಮಾತುಕತೆಯಾಡಿದರು. ಒಡನೇ ಅಲ್ಲಿಯ ಮೇಲ್ವಿಚಾರಕರ ಮನಸ್ಸು ಮೃದುವಾಗಿ ಹೋಯಿತು. ನನ್ನನ್ನು ಮತ್ತೆ ಕರೆಸಿ ಕೊಳ್ಳಲು ಒಪ್ಪಿದರು. ನಾನು ಮತ್ತೆ ಹಿಂತಿರುಗಿ, ಪರೀಕ್ಷೆಯನ್ನು ಮುಗಿಸಿ, ಏಪ್ರಿಲ್‌ನಲ್ಲಿ ನಿವೇದಿತಾ ಶಾಲೆಗೆ ಮರಳಿ ಬಂದೆ.

(ಮುಂದುವರಿಯುವುದು)

# ನಮ್ಮ 'ಗದಾಯ್ ಠಾಕೂರ್'

ಶೇಖ್ ಉಮೇದ್ ಅಲಿ

ಠಾಕೂರ್ ರಾಮಕೃಷ್ಣರನ್ನು ನಾವು 'ಗದಾಯ್ ಠಾಕೂರ್' ಎಂದೇ ಕರೆಯುತ್ತಿದ್ದೆವು. ಅದು ಬಹಳ ಹಿಂದಿನ ಮಾತು. ಗದಾಯ್ ಠಾಕೂರ್ ನಮ್ಮೆಲ್ಲರ ಸಂಗಾತಿಯಂತೆ ಇದ್ದರು. ಅವರು ವಯಸ್ಸಿನಲ್ಲಿ ನನಗಿಂತ ಐದಾರು ವರ್ಷಗಳು ದೊಡ್ಡವರು. ಅವರನ್ನು ನಾನು ಮೊದಲ ಸಲ ಕಂಡದ್ದು ಗರ್‌ಬೇತಾದಲ್ಲಿ. ಆಗ ನಾವಿಬ್ಬರು ಇನ್ನೂ ಹುಡುಗರು. ನಮ್ಮ ಆತ್ಮೀಯರಾದ ಮುನ್ಷಿ ಎನಾತುಲ್ಲಾ ಸಾಹೇಬರು ಆಗ ಗರ್‌ಬೇತಾದಲ್ಲಿ ಇದ್ದರು. ಅವರು ಮುನ್ಸೀಫ್ ಹುದ್ದೆಯಲ್ಲಿದ್ದರು. ಅವರು ಫಾರಸಿ ಭಾಷೆಯಲ್ಲಿ ಎಷ್ಟು ಪ್ರಾವೀಣ್ಯವನ್ನು ಹೊಂದಿದ್ದರೋ, ಅಷ್ಟೇ ಒಳ್ಳೆಯ ಸಂಗೀತಜ್ಞರೂ ಆಗಿದ್ದರು. ನಾನು ಹುಡುಗನಾಗಿದ್ದಾಗ ಅವರ ಬಳಿಯಲ್ಲಿ ಸಂಗೀತ ಪಾಠವನ್ನು ಹೇಳಿಸಿಕೊಳ್ಳುತ್ತಿದ್ದೆ. ಮುನ್ಷಿ ಸಾಹೇಬರು ಸಿತಾರನ್ನು ನುಡಿಸುತ್ತ ಗಜ಼ಲ್ ಹಾಡುತ್ತಿದ್ದರು. ಅವರಿಂದ ಫಾರಸಿ ಭಾಷೆಯನ್ನು ಕಲಿಯಲೆಂದೇ ಬಹು ದೂರದಿಂದ ವಿದ್ಯಾರ್ಥಿಗಳು ಬರುತ್ತಿದ್ದರು. ನಾನಾಗ ಗರ್‌ಬೇತಾದ ಮುನ್ಷಿ ಸಾಹೇಬರ ಮನೆಯಲ್ಲಿದ್ದೆ. ಆ ಸಮಯದಲ್ಲಿ ಒಂದು ದಿನ, ಕಾಮಾರಪುಕುರದಿಂದ ಹಾರಾಧನ ದತ್ತ ಎಂಬೊಬ್ಬ ಹುಡುಗ ಫಾರಸಿ ಭಾಷೆ ಕಲಿಯಲೆಂದು ಮುನ್ಷಿ ಸಾಹೇಬರ ಬಳಿ ಬಂದಿದ್ದ. ಅವನೊಂದಿಗೆ ಗದಾಯ್ ಠಾಕೂರರೂ ಬಂದಿದ್ದರು. ಅವರು ಬಂದ ಉದ್ದೇಶ ಮುನ್ಷಿ ಸಾಹೇಬರ ಹಾಡು ಕೇಳಲೆಂದು. ಇದಕ್ಕೂ ಮೊದಲು ಒಂದೆರಡು ಸಲ ಅವರಿಬ್ಬರೂ ಬಂದಿದ್ದರೆಂಬುದಾಗಿ  ನಾನು ಅರಿತೆ. ಮುನ್ಷಿ ಸಾಹೇಬರು ಗದಾಯ್ ಠಾಕೂರರನ್ನು ತೋರಿಸುತ್ತ ನನಗೆ ಹೀಗೆ ಹೇಳಿದರು: "ಈ ಹುಡುಗ ಒಬ್ಬ ಅಸಾಧಾರಣ ಮೇಧಾವಿ. ಅವನ ಕಣ್ಣುಗಳೆರಡನ್ನೂ, ಆ ತುಟಿಗಳೆರಡನ್ನೂ ನೋಡು; ಕೇವಲ ಕಿವಿಗಳಿಂದ ಮಾತ್ರ ಅವನು ಕೇಳುವುದಿಲ್ಲ, ತನ್ನ ಕಣ್ಣುಗಳಿಂದಲೂ ಕೇಳುತ್ತಾನೆ!" ಮುನ್ಷಿ ಸಾಹೇಬರ ಮಾತುಗಳನ್ನು ಕೇಳಿ ನಾನು ನಿಬ್ಬೆರಗಾದೆ. ಠಾಕೂರರ ದೇಹದಿಂದ ಒಂದು ವಿಶಿಷ್ಟವಾದ ಬೆಳಕು ಹೊರಬರುತ್ತಿರುವಂತೆ ನನಗೆ ಕಂಡುಬಂತು. ಈ ಘಟನೆಯಾದ ನಂತರ ನಾನು ಅವರ ಸ್ನೇಹವನ್ನು ಸಂಪಾದಿಸಿಕೊಂಡೆ.



ಶ್ರೀರಾಮಕೃಷ್ಣರ ಈ ಅಪೂರ್ವ ಸ್ಮೃತಿಚಿತ್ರಣವು ಸ್ವಾಮಿ ಪೂರ್ಣಾತ್ಮಾನಂದರ 'ಯುಗಪುರುಷ್ ಶ್ರೀರಾಮಕೃಷ್ಣ' ಎಂಬ ಬಂಗಾಳಿ ಗ್ರಂಥದಲ್ಲಿ ದೊರಕುತ್ತದೆ. ಈ ಸ್ಮೃತಿ ಚಿತ್ರಣವನ್ನು ಸಂಗ್ರಹಿಸಿದವರು ಶ್ರೀ ತಡಿತ್‌ಕುಮಾರ್ ವಂದ್ಯೋಪಾಧ್ಯಾಯ್. ಕನ್ನಡ ಅನುವಾದ ಮೈಸೂರಿನ ರಾಮಕೃಷ್ಣ ನೈತಿಕ ಮತ್ತು ಆಧ್ಯಾತ್ಮಿಕ ಶಿಕ್ಷಣ ಸಂಸ್ಥೆಯಲ್ಲಿ ಸೇವೆ ಸಲ್ಲಿಸುತ್ತಿರುವ ಸ್ವಾಮಿ ಕರುಣಾಕರಾನಂದಜಿ ಅವರಿಂದ.

ಗದಾಯ್ ಠಾಕೂರರ ಹೃದಯವನ್ನು ಅಳೆಯುವುದು ಕಷ್ಟವೇ. ಅವರಲ್ಲಿ ಒಂದಿನಿತೂ ಪೂರ್ವಗ್ರಹವಿರಲಿಲ್ಲ. ಮನುಷ್ಯನೊಬ್ಬ ಇಷ್ಟು ಉದಾರಹೃದಯನಾಗಿರಬಹುದೆಂದು, ಅವರನ್ನು ನೋಡಿಲ್ಲದಿದ್ದರೆ ನಾನೆಂದೂ ಅರಿಯಲು ಸಾಧ್ಯವಿರಲಿಲ್ಲ. ಅಲ್ಲಾಹುನದು ಅದೆಂತಹ ದಯೆ! ಅವರನ್ನು ನೋಡಿದೊಡನೆಯೇ ಅವರು ಅಲ್ಲಾಹುವಿನ ಒಬ್ಬ ದೂತನಂತೆ ನನಗೆ ಭಾಸವಾಗುತ್ತಿತ್ತು! ಮುನ್ಷಿ ಸಾಹೇಬರಿಂದ ಕೊರಾನ್‌ನ ವ್ಯಾಖ್ಯಾನವನ್ನು ಗಂಟೆಗಟ್ಟಳೆ ಅವರು ಕೇಳುತ್ತಿದ್ದುದನ್ನು ನಾನು ನೋಡಿದ್ದೇನೆ. ಒಂದು ಬಾರಿ ಗದಾಯ್ ಠಾಕೂರ್ ನನಗೆ ಹೀಗೆ ಹೇಳಿದರು: "ನನಗೆ ಈದ್‌ನ ಪ್ರಾರ್ಥನೆಯನ್ನು ನೋಡಬೇಕೆಂದು ಬಹಳ ಆಸೆಯಾಗುತ್ತಿದೆ. ಈದುಜ್ಜೋಹಾ (ಮುಸ್ಲಿಮರ ಹಬ್ಬ) ಇನ್ನು ಕೆಲವೇ ದಿನಗಳಲ್ಲಿ ಬರುತ್ತದೆ. ನೋಡುತ್ತಿರು, ಆ ದಿನ ನಾನಂದು ಮಂದಾರಣದಲ್ಲಿರುವ ಈದ್‌ಗಾಕ್ಕೆ ಬರುತ್ತೇನೆ." ನಾನು ಭಾವಿಸಿದ್ದೆ, ಇವರು ಹೀಗೆಯೇ ತಮ್ಮ ಮನಸ್ಸಿನ ಇಚ್ಛೆಯನ್ನು ಮಾತ್ರ ವ್ಯಕ್ತಪಡಿಸುತ್ತಿದ್ದಾರೆ, ಎಂದು. ಆದರೆ, ನಿಜವಾಗಿಯೂ ಅವರಂದು ಈದ್‌ಗಾಕ್ಕೆ ಬಂದಿದ್ದರು. ಎಲ್ಲರಿಗೂ ಅವರನ್ನು ನೋಡಿ ಬಹಳ ಸಂತೋಷವಾಗಿತ್ತು. ಮಂದಾರಣದಲ್ಲಿ ಅನೇಕರ ಪರಿಚಯ ಅವರಿಗೆ ಈಗಾಗಲೇ ಆಗಿತ್ತು.

ಅವರು ಮಂದಾರಣದಲ್ಲಿರುವ ಪೀರ್‌ದರ್ಗಾಕ್ಕೆ ಬಹಳ ಸಲ ಭೇಟಿ ನೀಡಿ, ಅಲ್ಲಿ ಚಿಕ್ಕ ದರ್ಗಾದಲ್ಲಿದ್ದ ಪೀರ್‌ಸಾಹೇಬರ ಬಳಿ ಗಂಟೆಗಟ್ಟಳೆ ಸಂವಾದವನ್ನು ನಡೆಸುತ್ತಿದ್ದರು. ಮಂದಾರಣಕ್ಕೆ ಅವರ ಈ ಭೇಟಿಯನ್ನು ಕುರಿತು, ಕಾಮಾರಪುಕುರದ ಸಮಾಜದಲ್ಲಿದ್ದ ಅನೇಕ ಸಂಪ್ರದಾಯಸ್ಥರು ದೊಡ್ಡ ಗಲಾಟೆಯೆಬ್ಬಿಸಿದರು. ಗದಾಯ್ ಠಾಕೂರರ ಅಣ್ಣ ಕೂಡ ಒಮ್ಮೆ ಅವರಿಗೆ ತಿನ್ನಲು ಏನೂ ಕೊಡದೆ ಕೋಣೆಯೊಂದರಲ್ಲಿ ಕೂಡಿಹಾಕಿದ್ದರು. ಅನಂತರ ಗದಾಯ್ ಠಾಕೂರರು ನನಗೆ ಆ ವಿಷಯವನ್ನು ತಿಳಿಸಿದರು. ಆಮೇಲೆ ಹೀಗೆ ಹೇಳಿದರು: "ಒಂದು ದಿನ ಊಟ ಕೊಡದೆ ಕೋಣೆಯೊಳಗೆ ಕೂಡಿಹಾಕಿ ನನ್ನನ್ನು ಹದ್ದುಬಸ್ತಿನಲ್ಲಿಡಬಹುದು ಎಂದುಕೊಂಡಿದ್ದಾರೆ. ಹತ್ತು ದಿನಗಳವರೆಗೆ ಊಟ ಮಾಡದೆಯೂ ಕೂಡ ನಾನು ಹೀಗೆಯೇ ಇರಬಲ್ಲೆ!" ಶ್ರೀಪುರದ ಗೋಸಾಯಿಗಳು ಗದಾಯ್ ಠಾಕೂರರನ್ನು ಉದ್ದೇಶಿಸಿ ವ್ಯಂಗ್ಯದಿಂದ ಹೇಳುತ್ತಿದ್ದರು, "ಗದಾಯ್ ಬೋಳುತಲೆಯವರ (ಮುಸಲ್ಮಾನರನ್ನು ಬಂಗಾಲದಲ್ಲಿ ಸಂಪ್ರದಾಯಸ್ಥರು ಕರೆಯುತ್ತಿದ್ದ ಆಡು ಭಾಷೆ 'ನೇಡ') ಮನೆಗೆ ಹೋಗುತ್ತಾನೆ. ಅವನಿಗೆ ಜಾತಿ–ಗೀತಿ ಏನೂ ಇಲ್ಲ. ಅವನೊಬ್ಬ ಮ್ಲೇಚ್ಛ!" ಗದಾಯ್ ಠಾಕೂರರು ಇಂತಹ ಗೊಡ್ಡು ಬ್ರಾಹ್ಮಣರಿಗೇ ಆಗಲಿ ಅಥವಾ ಮತಾಂಧ ಮುಸಲ್ಮಾನರಿಗೇ ಆಗಲಿ ಯಾವ ಬೆಲೆಯನ್ನೂ ಕೊಡುತ್ತಿರಲಿಲ್ಲ. ಅವರ ಕುರಿತಾಗಿ ಹೀಗೆ ಹೇಳುತ್ತಿದ್ದರು: ""ಅವರೆಲ್ಲ ಕೆಳ ಅಂತಸ್ತಿನ ಜನರು. ಕೂಪಮಂಡೂಕಗಳು. ಈ ಜಗತ್ತನ್ನೂ ಕೂಡ ಒಂದು ದೊಡ್ಡ ಬಾವಿಯೆಂದಷ್ಟೇ ಅವರು ಭಾವಿಸಿದ್ದಾರೆ. ಜಗತ್ತು ಅದಾರದ್ದು?"

ಜಾತ್ರೆಗಳು, ಹಬ್ಬಗಳು ಮತ್ತು ಕೀರ್ತನೆಯ ಕಾರ್ಯಕ್ರಮಗಳಲ್ಲಿ ಭಾಗವಹಿಸುವುದೆಂದರೆ ಗದಾಯ್ ಠಾಕೂರ್‌ಗೆ ಬಹಳ ಇಷ್ಟ. ಅವರ ಕಂಠವೂ ಬಹಳ ಮಧುರವಾಗಿತ್ತು. ನನ್ನ ಹಾಡುಗಳನ್ನು ಕೇಳುವುದಕ್ಕೆ ಅವರು ಬಹಳ ಇಷ್ಟಪಡುತ್ತಿದ್ದರು. ಆಶ್ಚರ್ಯದ ಸಂಗತಿಯೆಂದರೆ, ಗದಾಯ್ ಠಾಕೂರರು ಯಾವಾಗಲೂ ಅಂತರ್ಮುಖಿಯಾಗಿ ಇರುವ ಸ್ವಭಾವದವರಾಗಿದ್ದರೂ, ಹಾಡುವ ವಿಷಯದಲ್ಲಿ ಬಹಳ ಮುತುವರ್ಜಿ ವಹಿಸುತ್ತಿದ್ದರು. ಆಗ ಗದಾಯ್ ಠಾಕೂರರು ದಕ್ಷಿಣೇಶ್ವರದಲ್ಲಿ ಇದ್ದರು. ಜನರಿಂದ ತಿಳಿದುಬಂತು, ಗದಾಯ್ ಠಾಕೂರರಿಗೆ ತಲೆ ಕೆಟ್ಟಿದೆ ಎಂದು. ಕೆಲವು ದಿನಗಳ ನಂತರ ಅವರ ಅಣ್ಣ ಅವರನ್ನು ದಕ್ಷಿಣೇಶ್ವರದಿಂದ ಕಾಮಾರಪುಕುರಕ್ಕೆ ಕರೆದುಕೊಂಡು ಬಂದರು. ಬಾಲ್ಯಸಂಗಾತಿಯಾದ್ದರಿಂದ ನೋಡಲು ಅವರ ಮನೆಗೆ ಹೋದೆ. ಅಲ್ಲಿಗೆ ಹೋದ ಮೇಲೆ ತಿಳಿದುಬಂತು, ಅವರು ಬುದುಯಿ ಮೊಡೊಲ್ ಶ್ಮಶಾನಕ್ಕೆ ಹೋಗಿರುವುದಾಗಿ. ಅಲ್ಲಿಗೆ ಹೋಗಿ ನೋಡುತ್ತೇನೆ, ಕೊಳದ ದಡದಲ್ಲಿದ್ದ ಒಂದು ದೊಡ್ಡ ಅಶ್ವತ್ಥ ಮರದ ಬುಡದಲ್ಲಿ ಅವರು ಸುಮ್ಮನೆ ಕುಳಿತಿದ್ದಾರೆ! ನಾನು ಅವರ ಬಳಿಗೆ ಹೋಗುತ್ತಿರುವಂತೆಯೆ ಅವರು ಕುಳಿತಲ್ಲಿಂದ ಎದ್ದು, ನನ್ನೆಡೆಗೆ ಓಡಿಬಂದು ಕೇಳಿದರು, "ಅರೆ! ಅಲಿ. ಇಷ್ಟು ದಿನಗಳು ಎಲ್ಲಿದ್ದೆ? ನೋಡು, ನಾನು ಬದುಕುಳಿಯುತ್ತಿರಲೇ ಇಲ್ಲ. ಈಗಲೂ ನನ್ನ ಆರೋಗ್ಯ ಬಹಳ ಕೆಟ್ಟಿದೆ. ಸೋದರ ಉಮೇದ್, ಈಗಲೂ ನೀನು ಹಾಡುತ್ತಾ ಇರುತ್ತಿಯಾ?" ನಾನು ಉತ್ತರಿಸಿದೆ, "ಇಲ್ಲ. ಈಗ ನನಗೆ ಹಾಡಲಾಗುತ್ತಿಲ್ಲ. ಸಂಸಾರದ ಭಾರ ಹೊರಬೇಕಾಗಿರುವುದರಿಂದ ನಾನೀಗ ಬಟ್ಟೆಯ ವ್ಯಾಪಾರ ಮಾಡುತ್ತಿದ್ದೇನೆ. ಬದನ್‌ಗಂಜ್ ಹಾಗೂ ಶ್ಯಾಮ್‌ಬಾಜ಼ಾರ್‌ಗಳಿಂದ ಬಟ್ಟೆಗಳನ್ನು ಖರೀದಿಸಿ ಕೊಲ್ಕತ್ತಾ ಖಿದಿರ್‌ಪುರ್‌ಗಳಿಗೆ ತೆಗೆದುಕೊಂಡು ಹೋಗುತ್ತೇನೆ." ಸ್ವಲ್ಪ ಸಮಯದ ನಂತರ ಗದಾಯ್ ಠಾಕೂರರು ಅನ್ಯಮನಸ್ಕರಾಗಿ ಹೇಳಿದರು, "ಒಳ್ಳೆಯದು ಉಮೇದ್, ಇಂದು ನಿನ್ನ ಕಂಠದಿಂದ ಹಾಡನ್ನು ಕೇಳಬೇಕೆಂಬ ಆಸೆಯಾಗುತ್ತಿದೆ." ನನಗೆ ಆಗ ಹಾಡುವ ಅಭ್ಯಾಸ ತಪ್ಪಿಹೋಗಿತ್ತು. ಆದರೂ ಅಂದು ಆ ಶ್ಮಶಾನದಲ್ಲಿ, ಅವರ ಒತ್ತಾಯಕ್ಕೆ ಮಣಿದು ಒಂದೆರಡು ಹಾಡುಗಳನ್ನು ಹಾಡಿದೆ. ಇದರಿಂದ ಗದಾಯ್ ಠಾಕೂರರಿಗೆ ಬಹಳ ಸಂತೋಷವಾಯಿತು.

ಒಮ್ಮೆ ಅವರಿಗೆ ಪೀರನ ಮೇಳವನ್ನು ನೋಡಬೇಕೆಂಬ ಇಚ್ಛೆಯಾಯಿತು. ಅಂದಿನ ದಿನಗಳಲ್ಲಿ ಆಮ್‌ದೋಬಾ ಗ್ರಾಮದ ಬಳಿಯಿರುವ ಆಶಾಲಹರಿ ಗ್ರಾಮದಲ್ಲಿ ದೊಡ್ಡ ಪೀರರ ಬೃಹತ್ ಉತ್ಸವ ನಡೆಯುತ್ತಿತ್ತು. ಬಹಳ ದೂರದಿಂದ ಫಕೀರರು, ದರವೇಶರು ಮೇಳದಲ್ಲಿ ಬಂದು ಸೇರುತ್ತಿದ್ದರು. ಗದಾಯ್ ಠಾಕೂರರೂ ಈ ಮೇಳ ನಡೆಯುವಲ್ಲಿ ಅನೇಕ ಫಕೀರ–ದರವೇಶರು ಸೇರುವರೆಂಬುದಾಗಿ ಕೇಳಿ ತಿಳಿದಿದ್ದರು. ಈ ಮೇಳಕ್ಕೆ ತಮ್ಮನ್ನೂ ಕರೆದುಕೊಂಡು ಹೋಗುವಂತೆ ನನಗೆ ದುಂಬಾಲು ಬಿದ್ದರು. ಹೀಗಾಗಿ ಅವರನ್ನು ಅಲ್ಲಿಗೆ ಕರೆದುಕೊಂಡು ಹೋಗಲೇಬೇಕಾಯಿತು. ಅಲ್ಲಿಗೆ ಹೋದ ಮೇಲೆ ತೊಂದರೆಗೆ ಸಿಲುಕಿದೆವು. ಗದಾಯ್ ಠಾಕೂರರು ದರವೇಶರ ಗುಂಪಿನಲ್ಲಿ ಸಂಪೂರ್ಣ ಬೆರೆತುಹೋದರು. ಸ್ವಲ್ಪ ಸಮಯದ ಬಳಿಕ ಅವರ ಕೆನ್ನೆಗಳಿಂದ ಕಣ್ಣೀರು ಒಂದೇ ಸಮನೆ ಸುರಿಯುತ್ತಿದ್ದುದನ್ನು ಕಂಡೆ. ಪೀರರು ಹಾಡುತ್ತಿದ್ದರು, ಅದನ್ನು ತನ್ಮಯತೆಯಿಂದ ಠಾಕೂರರು ಕೇಳುತ್ತಿದ್ದರು. ಅದರ ಫಲವಾಗಿಯೇ ಅವರಿಗೆ ಆ ಅವಸ್ಥೆ! ಬಹಳ ಕಷ್ಟದಿಂದ ಅವರನ್ನು ಅಲ್ಲಿಂದ ಮನೆಗೆ ಕರೆದುಕೊಂಡು ಬಂದೆ. ಅನಂತರ ಒಂದು ದಿನ ನಾನವರನ್ನು ಕೇಳಿದೆ: "ಒಳ್ಳೆಯದು ಠಾಕೂರ್! ಆ ದಿನ ನೀನು ಹಾಗೇಕೆ ಮಾಡಿದೆ?" ಅದಕ್ಕುತ್ತರವಾಗಿ ಗದಾಯ್ ಠಾಕೂರರು ಹೇಳಿದರು, "ಫಕೀರರ ಆ ಹಾಡನ್ನು ಕೇಳಿ ನನಗನಿಸಿತು, 'ನಾವೆಷ್ಟು ಸಣ್ಣ ಬುದ್ಧಿಯುಳ್ಳವರು! ಅದೆಷ್ಟು ಭೇದಬುದ್ಧಿಯುಳ್ಳವರು!' ನಿಜವಾಗಿಯೂ ಎಲ್ಲವೂ ಮಣ್ಣೇ. ಪ್ರಾಣ ದೇಹದಿಂದ ಹೊರಟು ಹೋದರೆ ಕೊಳ ಯಾರದ್ದು? ಜಮೀನು ಯಾರದ್ದು?"

ಇನ್ನೊಂದು ಘಟನೆ ನನ್ನ ನೆನಪಿಗೆ ಬರುತ್ತಿದೆ. ಮಂದಾರಣ ಗ್ರಾಮದಲ್ಲಿ ಮುಸಲ್ಮಾನರು ಕೂಡ ಸಾಕಷ್ಟು ಶ್ರೀಮಂತರಾಗಿದ್ದರು. ಗದಾಯ್ ಠಾಕೂರರು ಅವರನ್ನೂ ನಿಕಟವಾಗಿ ಬಲ್ಲವರಾಗಿದ್ದರು. ಆ ಶ್ರೀಮಂತರು ಕೊಲ್ಕತಾದಲ್ಲಿ